ಕಳುಹಿಸುತ್ತಿದ್ದೀರಿ, ಅಲ್ಲಿ ಬೋರ್‌ವೆಲ್ ಇಲ್ಲದಿದ್ದರೆ ನಿಮ್ಮ ದನಗಳು ಏನನ್ನು ಕುಡಿಯುತ್ತವೆ ಅನ್ನುವುದನ್ನು ತಾವು ಕರೆಸಿ ಕೇಳಿಸುತ್ತೀರಾ? ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಅದು ನನ್ನ ಕ್ಷೇತ್ರ ಅಲ್ಲ, ಮಾನ್ಯ ಮಂಜುನಾಥ್‌ರವರ ಕ್ಷೇತ್ರ. ಆದರೂ ಅನುಕೂಲ ಇದೆ ಅನ್ನುವಂತಹ ಒಂದೇ ಕಾರಣಕ್ಕಾಗಿ ನಾನು ಪ್ರಶ್ನೆ ಹಾಕಿದ್ದೇನೆ. ನೀವು ಹೀಗೆ ಹೇಳಬಾರದು. ತಾವು ಒಂದು ಸಾರಿ ಹೋಗಿ ನೋಡಿ; ತಾವು ಹೋಗಿ ನೋಡುವುದಿಲ್ಲ, ಮಾಡುವುದಿಲ್ಲ, ಏಕಾಏಕಿ ಈ ರೀತಿಯಾಗಿ ನಮಗೆ ಉತ್ತರ ಹೇಳಿದರೆ ನಮಗೆ ಇಲ್ಲಿ ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ದಯಮಾಡಿ ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಪರಿಶೀಲಿಸುತ್ತೇವೆ ಎಂದು ಮಾತ್ರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : – ಒಂದು ರಾಜ್ಯದಲ್ಲಿ ಪಶುವೈದ್ಯ ಶಾಲೆಯನ್ನು ಸ್ಥಾಪಿಸಬೇಕಾದರೆ ಏನೇನು ಬೇಕು ಎನ್ನತಕ್ಕದ್ದು ಸರ್ಕಾರದವರು ಪರಿಣಿತರ ಮೂಲಕ ಪಂಡಿತರ ಮೂಲಕ ವಿಚಾರವನ್ನು ವರದಿ ತರಿಸಿಕೊಂಡು ಅದರ ಆಗುಹೋಗುಗಳು ಏನೆಂದು ತಿಳಿದುಕೊಂಡು ಮಾಡತಕ್ಕದ್ದು ಸಹಜ. ಈಗಾಗಲೇ ಪಶುವೈದ್ಯ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳು ಒಂದು ರಾಜ್ಯದಲ್ಲಿ ಪಶುವೈದ್ಯ ಕಾಲೇಜನ್ನು ಸ್ಥಾಪಿಸುತ್ತೇವೆಂದು ಹೇಳಿದ್ದಾರೆ. ಈಗ ಪ್ರಪಂಚದಲ್ಲೇ ಬಹಳ ಪ್ರಸಿದ್ಧಿಯಾದಂತಹ ಅಮೃತಮಹಲ್ ತಳಿ ಇರತಕ್ಕಂಥ ಸ್ಥಳ ಇದಾಗಿದೆ. ಭೂಮಿಯೇ ಪ್ರಾಮುಖ್ಯ ಇಲ್ಲ. ಭೂಮಿಗಿಂತ ತಳಿ ಪ್ರಾಮುಖ್ಯವಾದುದು. ಬ್ರಿಟಿಷರ ಕಾಲದಲ್ಲಿ ಅಮೃತ್‌ಮಹಲ್ ತಳಿಗಳು ಬಹಳ ಪ್ರಸಿದ್ಧಿಯಾಗಿದ್ದವು. ಮದ್ದು ಗುಂಡುಗಳ ದೊಡ್ಡಗಾಡಿಗಳನ್ನು ಎಳೆಯತಕ್ಕಂಥ ಶಕ್ತಿ ಇರುವಂಥದ್ದು ಎಂದು ಕೇಳಿದ್ದೆ. ಬೀರೂರ್‌ನಲ್ಲಿ ಒಂದು ಅಮೃತ್‌ಮಹಲ್ ಬ್ರೀಡಿಂಗ್ ಸ್ಟೇಷನ್ ಇದೆ. ಅಲ್ಲಿ ಬೇಕಾದಷ್ಟು ಅನುಕೂಲಗಳು ಇದೆ. ಎಲ್ಲಾದರೂ ಒಂದು ಕಡೆ ಕಾಲೇಜನ್ನು ಮಾಡುವ ಕಾಲದಲ್ಲಿ ಇವೆಲ್ಲವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಅವರು ಇಂತಹ ಊರಿನಲ್ಲಿ ಮಾಡಿ ಎಂದು ಹೇಳಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಕೃಷಿ ಮಂತ್ರಿಗಳು ಇದೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಇದನ್ನು ದೀರ್ಘವಾಗಿ ಪರಿಶೀಲಿಸಿ ಮಾಡಬೇಕು. ನಾನು ಹಿಂದೆ ಕೃಷಿ ಮಂತ್ರಿಯಾಗಿದ್ದರ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : – ತಾವು ಉಪಪ್ರಶ್ನೆಯನ್ನು ಕೇಳಿ.

ಶ್ರೀ ಎನ್.ಚಿಕ್ಕೇಗೌಡ : – ಅಲ್ಲಿ ಒಂದು ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ. ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಲಿ; ಮಂತ್ರಿಗಳು ಏನು ಉತ್ತರ ಹೇಳುತ್ತಾರೆ ಹೇಳಲಿ.

ಶ್ರೀ ಎನ್.ಹುಚ್ಚಮಾಸ್ತಿಗೌಡ : – ಈಗಾಗಲೇ ಈ ಪ್ರಶ್ನೆಯನ್ನು ಕಳುಹಿಸಿದಂತಹ ಸ್ನೇಹಿತರಿಗೆ ನಾನು ಉತ್ತರವನ್ನು ಹೇಳಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟಂಥ ಮಂತ್ರಿಗಳ ಜೊತೆಯಲ್ಲಿ ಇದರ ಅವಶ್ಯಕತೆ ಎಷ್ಟಿದೆ ಅನ್ನುವುದರ ಬಗ್ಗೆ ಬೇರೆಬೇರೆ ವಿಷಯಗಳನ್ನು ಸಂಗ್ರಹಿಸಿ ನಾನು ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದೆನೆ. ಅದೇ ಉತ್ತರ ಮಾನ್ಯ ಚಿಕ್ಕೇಗೌಡರಿಗೂ ಅನ್ವಯಿಸುತ್ತದೆ.

ವಿಷಯ : – ಮೂರ್ತೆದಾರರ ಸಹಕಾರ ಸಂಘಗಳನ್ನು ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 132(613)

ಶ್ರೀ ಕೆ. ಸೋಮಪ್ಪ ಸುವರ್ಣ(ಮೂಡಬಿದರೆ) : – ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ)ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೂರ್ತೆದಾರರ ಸಹಕಾರಿ ಸಂಘಗಳು ಇದೆ; ಅವು ಯಾವುವು?

ಆ) ಅರ್ಜಿ ಸಲ್ಲಿಸಿ ನೋಂದಣಿಯಾಗದೆ ಬಾಕಿ ಉಳಿದಿರುವ ಸಹಕಾರ ಸಂಘಗಳು ಯಾವುವು?

ಇ) ಇವುಗಳನ್ನು ಯಾವಾಗ'ೀನೋಂದಣಿ ಮಾಡಲಾಗುವುದು?

ಈ) ಲೀಟರ್ ಫೀಯಿಂದಾಗಿ ಈ ಸಹಕಾರಿ ಸಂಘಗಳ ವ್ಯವಹಾರ ನಡೆಸಲು ಕಷ್ಟವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಉ) ಹಾಗಿದ್ದಲ್ಲಿ ಲೀಟರ್ ಫೀಯನ್ನು ಯಾವಾಗ ರದ್ದುಪಡಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 35 ಮೂರ್ತೆದಾರರ ಸೇವಾ ಸಹಕಾರಿ ಸಂಘಗಳು ಇದ್ದು ಇವುಗಳ ವಿವರವನ್ನು ಅನುಬಂಧ-1ರ ಪಟ್ಟಿಯಲ್ಲಿ ಲಗತ್ತಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ನಿಯೋಜಿತ ಮೂರ್ತೆದಾರರ ಸಹಕಾರ ಸಂಘಗಳು ಅರ್ಜಿ ಸಲ್ಲಿಸಿ ನೋಂದಣಿಯಾಗದೆ ಬಾಕಿ ಉಳಿದಿರುತ್ತವೆ.

(ಇವುಗಳ ವಿವರವನ್ನು ಅನುಬಂಧ -2ರಲ್ಲಿ ಲಗತ್ತಿಸಲಾಗಿದೆ).

ಈ ಸಂಘಗಳನ್ನು ನೋಂದಣಿ ಮಾಡದಂತೆ ಉಚ್ಚ ನ್ಯಾಯಾಲಯವು ನೀಡಿದ ತಡೆಯಾಜ್ಞೆಯು ಇತ್ತೀಚೆಗೆ ತೆರವಾಗಿದೆ. ಆ ನೋಂದಾವಣೆಗೆ ಬಾಕಿ ಇರುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿದೆ ಆದಷ್ಟು ಬೇಗ ಸಹಕಾರ ಸಂಘಗಳನ್ನು ನೋಂದಾಯಿಸಲು ಕ್ರಮ ತೆಗೆದುಕೊಳ್ಳಲಾಗುವುದು

ಹೌದು

ಈ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳಲು ಅಬಕಾರಿ ಇಲಾಖೆಗೆ ಕಳಹಿಸಿದೆ.

ಅನುಬಂಧ-1

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ನೋಂದಾಣಿಯಾಗಿರುವ ಮೂರ್ತೆದಾರರ ಸಹಕಾರ ಸಂಘಗಳು

ಕ್ರಮ ಸಂಖ್ಯೆ	ಸಂಘದ ಹೆಸರು	
1) ಮಂಗಳೂರು ತಾಲ್ಲೂಕು		
1)	ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ)	ಭಾಲ್ಕಿ(ಹಳೆಯಂಗಡಿ)
2)	-ಡಿ-	ಮೂಡುಪರಾರ್
3)	-ಡಿ-	ಕುಪ್ಪಪದವು
4)	-ಡಿ-	ದೇರೆಬೈಲು (ಕೊಂಚಾಡಿ)
5)	-ಡಿ-	ಬಜ್ಪೆ
6)	-ಡಿ-	ಪಾವೂರು
7)	-ಡಿ-	ಪಡೀಲ್
8)	-ಡಿ-	ನೀರುಮಾರ್ಗ
2)ಬಂಟ್ವಾಳ ತಾಲ್ಲೂಕು		
9)	-ಡಿ-	ಸಚಿಪಮನ್ನೂರು

10) -ಡಿ- ವಾಮದಪದ
11) -ಡಿ- ನರಿಕೊಂಬು

3)ಪುತ್ತೂರು ತಾಲ್ಲೂಕು

12) -ಡಿ- ಉಪ್ಪಿನಂಗಡಿ
13) -ಡಿ- ಕುಂಬ್ರ
14) -ಡಿ- ಪುತ್ತೂರು
15) -ಡಿ- ಅಲಂಕಾರು
16) -ಡಿ- ನರಿಮೊಗರು

4)ಸುಳ್ಯ ತಾಲ್ಲೂಕು

17)ಮೂರ್ತೆದಾರರ ಸೇವಾ ಸಹಕಾರ ಸಂಘ (ನಿ) ಪಂಜ
18) -ಡಿ- ಅಜ್ಜಾವರ
19) -ಡಿ- ಬಳ್ಪಾರಿ

5)ಬೆಳ್ತಂಗಡಿ ತಾಲ್ಲೂಕು ಯಾವುದೇ ಮೂರ್ತೆದಾರರ ಸಹಕಾರ ಸಂಘದ ನೋಂದಣಿಯಾಗಿರುವುದಿಲ್ಲ.

6)ಉಡುಪಿ ತಾಲ್ಲೂಕು

20)ಮೂರ್ತೆದಾರರ ಸೇವಾ ಸಹಕಾರ ಸಂಘ ನಿ. ಕೋಟ
21) -ಡಿ- ಕೆಮ್ಮಣ್ಣು
22) -ಡಿ- ಬ್ರಹ್ಮಾವರ
23) -ಡಿ- ಉದ್ಯಾವರ
24) -ಡಿ- ಕಾಪು
25) -ಡಿ- ಕಟಪಾಡಿ
26) -ಡಿ- ಮಜೂರು
27) -ಡಿ- ಪಡುಬಿದ್ರಿ
28) -ಡಿ- ವಲ್ಪೆ

7)ಕಾರ್ಕಳ ತಾಲ್ಲೂಕು

29)ಮೂರ್ತೆದಾರರ ಸೇವಾ ಸಹಕಾರ ಸಂಘ ನಿ. ಇರುಪ್ಪೆಲು
30) -ಡಿ- ಮುಂದ್ಕೂರು
31) -ಡಿ- ತಾಣೂರು
32) -ಡಿ- ಕಲ್ಯಾ

8)ಕುಂದಾಪುರ ತಾಲ್ಲೂಕು

33)ಮೂರ್ತೆದಾರರ ಸೇವಾ ಸಹಕಾರ ಸಂಘ ನಿ.ನಾವುಂದ
34) -ಡಿ- ಹೆಮ್ಮಾಡಿ
35) -ಡಿ- ಉಪ್ಪುಂದ

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರ 35 ಸೇವಾ ಸಹಕಾರ ಸಂಘಗಳು ಎರಡು ವರ್ಷಗಳ ಮೊದಲೇ ಪ್ರಾರಂಭಿಸಲ್ಪಟ್ಟು, 15 ಸಹಕಾರಿ ಸಂಘಗಳು ಅರ್ಜಿ ಸಲ್ಲಿಸಿ, ಹೈಕೋರ್ಟಿನಿಂದ ಸ್ಟೇ ಬಂದ ಕಾರಣ ಅವುಗಳು ಇನ್ನೂ ಅಸ್ತಿತ್ವಕ್ಕೆ ಬಾರದೆ ಅಲ್ಲಿಯ ಮೂರ್ತೆದಾರರಿಗೆ ತೊಂದರೆಯಾಗಿದೆ. ಈಗ ಆ ಸ್ಟೇ ವೆಕೇಟ್ ಆಗಿದೆ, ವೆಕೇಟ್ ಆಗಿ ಮೂರು ನಾಲ್ಕು ತಿಂಗಳುಗಳು ಕಳೆದರೂ ಸಹ ಈ 15 ಸಹಕಾರಿ ಸಂಘಗಳನ್ನು ಇಷ್ಟರವರೆಗೆ ನೋಂದಣಿ ಮಾಡಿರುವುದಿಲ್ಲ. ಈಗಾಗಲೇ ಸೇಂದಿ ಇಳಿಸುವ ಕಾಲ ಬಂದ ಕಾರಣ ಅದನ್ನು ಯಾವಾಗ ಮಾಡುತ್ತೀರಿ? 15 ಸಹಕಾರಿ ಸಂಘಗಳನ್ನು ಯಾವಾಗ ನೋಂದಣಿ ಮಾಡುತ್ತೀರೆಂದು ಸ್ಪಷ್ಟವಾಗಿ ತಿಳಿಸಬೇಕೆಂದು ಮಂತ್ರಿಯವರಿಂದ ಕೇಳಬಯಸುತ್ತೇನೆ. ಏಕೆಂದರೆ ಇದು ಬಹಳ ಅತ್ಯಾವಶ್ಯಕವಾದಂಥ ಕಾಲ. ಮುಂದಿನ ತಿಂಗಳಿಂದ ಸೇಂದಿ ಇಳಿಸುವಂಥ ಕಾಲ ಬಂದಿದೆ. ಆ 15 ಸಹಕಾರಿ ಸಂಘಗಳಿಗೆ ಇದರ ಪ್ರಯೋಜನ ತಪ್ಪಿಹೋಗಿದೆ. ಆದ್ದರಿಂದ ಯಾವಾಗ ಅದನ್ನು ಎಷ್ಟು ಬೇಗ ಮಾಡುತ್ತೀರಿ ಎಂದು ತಮ್ಮ ಹತ್ತಿರ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದಷ್ಟು ಬೇಗನೆ ಮಾಡಿಸಿಕೊಡುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಕೋರ್ಟಿನಿಂದ ಸ್ಟೇ ವೆಕೇಟ್ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ವೆಕೇಟ್ ಆಗಿದೆ. ಅದಕ್ಕಾಗಿ ತಕ್ಷಣ ಆದಷ್ಟು ಬೇಗನೆ ಮಾಡಿಕೊಡುತ್ತೇನೆ. ನೀವು ಎಂಟು ದಿವಸವಾದರೂ ಟೈಮ್ ಕೊಡಿ.

ಶ್ರೀ ಕೆ. ಸೋಮಪ್ಪ ಸುವರ್ಣ:- ಒಂದು ಲೀಟರ್‌ಗೆ ಒಂದು ರೂಪಾಯಿಯ ಫೀ ರೀತ್ಯಾ ಈ ಸೊಸೈಟಿಗಳು ಅಸ್ತಿತ್ವಕ್ಕೆ ಬಂದಿವೆ. ಬಹಳ ತೊಂದರೆಯಾಗಿದೆ. ಆರ್ಥಿಕವಾಗಿ ಅವುಗಳು ಬಹಳ ಕಷ್ಟವನ್ನು ಅನುಭವಿಸುತ್ತಿವೆ; ನಷ್ಟವನ್ನು ಅನುಭವಿಸುತ್ತಿವೆ. ಲೀಟರ್ ಫೀಯನ್ನು ಕಟ್ಟಲಾಗದೆ ಅವುಗಳಿಗೆ ಹೊಸ ಲೈಸೆನ್ಸನ್ನು ಕೊಡದಿರುವಂಥ ಪ್ರಮೇಯ ಬಂದಿದೆ. ಈಗಾಗಲೇ ಮೂರ್ತೆದಾರರುಗಳ ಸಹಕಾರ ಸಂಘದವರು ಆ ಜಿಲ್ಲೆಯ ಶಾಸಕರು, ಊರಿನ ಜನರು ಈ ಲೀಟರ್ ಫೀಯನ್ನು ಕೂಡಲೇ ರದ್ದುಪಡಿಸಿ ಈ ಸಂಸ್ಥೆಗಳಿಗೆ ಜೀವದಾನವನ್ನು ಕೊಡಬೇಕು ಎಂದು ಹೇಳಿ ಕೇಳಿದ್ದಾರೆ. ಆ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಳಿದ ಹಾಗೆ ಈ ಲೀಟರ್ ಫೀಜು ಏನಿದೆ, ಇದರಿಂದ ತೊಂದರೆ ಇದೆ ಎಂದು ಅಲ್ಲಿನ ಸಂಘದವರು ಕೂಡ ಅರ್ಜಿ ಸಲ್ಲಿಸಿದ್ದಾರೆ ಮತ್ತು ನಮಗೆ ರೆಪ್ರೆಸೆಂಟೇಷನ್ ಕೂಡ ಬಂದಿದೆ. ಅದಕ್ಕೆ ನಾನು ಎಕ್ಸೈಸ್ ಡಿಪಾರ್ಟ್‌ಮೆಂಟಿನವರಿಗೆ ಹೇಳಿದ್ದೇನೆ, ಈ ಲೀಟರ್ ಫೀಜನ್ನು ಹಾಕುವುದಕ್ಕಿಂತಲೂ ಅವರೇನು ಸಲಹೆ ಮಾಡಿದ್ದಾರೆಂದರೆ, ಪ್ರತಿಯೊಬ್ಬ ಮೂರ್ತೆದಾರರು ನೂರು ರೂಪಾಯಿಯ ಹಾಗೆ ಅಥವಾ ರಿಜಿಸ್ಟರ್ ಸೊಸೈಟಿಗಳಿಂದ ಸಾವಿರದಿಂದ ಮೂರು ಸಾವಿರ ರೂಪಾಯಿ ತೆಗೆದುಕೊಂಡು ಮಾಡಿದರೆ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯ ಮೇರೆಗೆ ನಾನು ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ಬರೆದಿದ್ದೇನೆ. ಎಕ್ಸೈಸ್ ಡಿಪಾರ್ಟ್‌ಮೆಂಟಿನವರು ಒಪ್ಪಿಕೊಂಡರೆ ನಮ್ಮದೇನೂ ಆಭ್ಯಂತರವಿಲ್ಲ.

ವಿಷಯ:- ಮುಂಡರಗಿ ಮತ್ತು ಗದಗ ತಾಲ್ಲೂಕಿನಲ್ಲಿನ ಬರ ಪರಿಸ್ಥಿತಿ ಬಗ್ಗೆ